

ತಗೋಬೇಡಿ. ನಿಮ್ಮ ನಿಮ್ಮ ಆಯಸ್ಸು ತಿಳಿಯಬೇಕಾದ್ರೆ ಆ ಪ್ರವಾದಿ ಹತ್ರ ಹೋಗಿ ಒಮ್ಮೆ ತೋರಿಸಿಕೊಳ್ಳಿ' ಎಂದು ಜನರನ್ನು ಪ್ರವಾದಿಯ ಬಳಿ ಅಟ್ಟುತ್ತಿದ್ದರು.

ಪ್ರವಾದಿಯ ಬಳಿ ಬಂದವರಲ್ಲಿ ಒಬ್ಬನು 'ನನ್ನ ಮೊಮ್ಮಗನ ಮೊದಲನೇ ವರ್ಷದ ಹ್ಯಾಪಿ ಬರ್ತ್ ಡೇ ಮಾಡುತ್ತಿದ್ದೇನೆ ಪ್ರಭು. ಬರೋಬ್ಬರಿ ಒಂದು ಸಾವಿರ ಕೋಟಿಯ ಒಂದು ವಾರದ ಸಂಭ್ರಮಾಚರಣೆ. ಅದಕ್ಕೆ ನಮ್ಮ ದೇಶದ ಪ್ರಧಾನಿಯಿಂದ ಹಿಡಿದು ಎಲ್ಲಾ ಗಣ್ಯಾತಿಗಣ್ಯರೂ, ಅಮೆರಿಕದ ಅಧ್ಯಕ್ಷ, ಯೂರೋಪಿನ ಅನೇಕ ಗಣ್ಯರು ಆಗಮಿಸಲಿದ್ದಾರೆ. ಆದರೆ ನನಗೇಕೋ ಬರೀ ಅಪಶಕುನಗಳೇ ಗೋಚರಿಸುತ್ತಿವೆ. ಮೊನ್ನೆ ನನ್ನ ಹೆಲಿಕಾಪ್ಟರೊಂದು ನೆಲಕ್ಕಪ್ಪಳಿಸಿ ಭಸ್ಮವಾಯಿತು. ನಾವು ಪ್ರೀತಿಯಿಂದ ಸಾಕಿದ್ದ ನಾಯಿ ಇದ್ದಕ್ಕಿದ್ದಂತೇ ಸತ್ತು ಹೋಯಿತು. ಅಪರೂಪದ 'ಚೌ ಚೌ' ಜಾತಿಯ ನಾಯಿಯಾಗಿತ್ತು. ಇಡೀ ಜಗತ್ತನ್ನೇ ಸುತ್ತಿ ಮೆಚ್ಚಿ ಚೈನಾದಿಂದ ಕೊಂಡು ತಂದಿದ್ದೆ. ನನ್ನ ವಾರ ಭವಿಷ್ಯ, ಮಾಸ ಭವಿಷ್ಯ ಯದ್ವಾತದ್ವಾ ಬರುತ್ತಿವೆ. ನನ್ನ ಮೊಮ್ಮಗನ ಹುಟ್ಟುಹಬ್ಬಕ್ಕೆ ನಾನಿರುತ್ತೇನೋ ಇಲ್ಲವೋ ಎಂಬ ಭಯ ಕಾಡುತ್ತಿದೆ. ದೇವರ ಒಡನಾಡಿಗಳಾದ ತಾವೇ ನನ್ನನ್ನು ಕಾಪಾಡಬೇಕು ಎಂದು ಉದ್ದಂಡ ನಮಸ್ಕರಿಸಿದ. ಸಂಪ್ರೀತರಾದ ಪ್ರವಾದಿಯವರು ಸದ್ಯಕ್ಕೆ ಇಪ್ಪತ್ತೈದು ವರ್ಷದ ಆಯಸ್ಸನ್ನು ವರ್ಗಾವಣೆ ಮಾಡಿ ಮುಂದೆ ಮತ್ತೊಮ್ಮೆ ನೋಡೋಣ ಎಂದು ಆಶೀರ್ವದಿಸಿ ಹಣ ವರ್ಗಾಯಿಸಿಕೊಂಡು ಕಳುಹಿಸಿಕೊಟ್ಟರು.

ಇನ್ನೊಂದು ದಿನ ದೇಶದಲ್ಲೆಲ್ಲ ಪೋಲಿ ಎಂದು ಹೆಸರಾಗಿದ್ದ ಅರವತ್ತು ವರ್ಷದ ವರ್ಣರಂಜಿತ ಹಿರಿಯ ಬಂದು ಪ್ರವಾದಿಗೆ ನಮಸ್ಕರಿಸಿ ನಿಂತ. 'ನನ್ನ ಬಳಿ ಇರುವ ಸಂಪತ್ತು ಲೆಕ್ಕ ಹಾಕಲಾಗುವುದಿಲ್ಲ. ಒಂದು ದಿನದ ಆಯಸ್ಸಿಗೆ ಕೇಳಿದಷ್ಟು ದುಡ್ಡು ಕೊಡಬಲ್ಲೆ.